ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 02.11.2023.

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯದಿಂದಾ ಕೂಡಿದ್ದು, ಅದನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿರುತ್ತದೆ ಮತ್ತು ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

ಇಂದು ನಾನು ದಾವೆಗೆ ಸಂಬಂಧಪಟ್ಟಂತೆ ಕೆಲವು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ಅವುಗಳನ್ನು ನನ್ನ ಪರವಾಗಿ ಪರಿಗಣಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ದಿಃ 13.07.1992 ರ ದೃಢಿಕೃತ ನಕಲಿನ ಕ್ರಯ ಪತ್ರವನ್ನು ನಿಡಿ-2 ಎಂದು, ಮ್ಯೂಟೇಷನ್ ಪ್ರತಿಯನ್ನು ನಿಡಿ-3 ಎಂದು, ಒಎಸ್.ನಂ.4/2020 ರಲ್ಲಿಯ ವಾದಪತ್ರದ ದೃಢಿಕೃತ ನಕಲನ್ನು ನಿಡಿ-4 ಎಂದು ಗುರುತಿಸಲಾಯಿತು.

ಆದ್ದರಿಂದ ವಾದಿಯ ದಾವೆಯನ್ನು ಖರ್ಚು ಸಮೇತ ವಜಾ ಮಾಡಬೇಕೆಂದು ಮಾನ್ಯ ನ್ಯಾಯಾಲಯಕ್ಕೆ ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

(ಈ ಹಂತದಲ್ಲಿ ವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 02.11.2023.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನನಗೆ ಪ್ರತಿವಾದಿ ಕುಟುಂಬದ ಸದಸ್ಯರ ಬಗ್ಗೆ ಮಾಹಿತಿ ಇರುತ್ತದೆ. ಪ್ರತಿವಾದಿಗೆ ಸುಮಾರು 6 ವರ್ಷಗಳ ಹಿಂದೆ ಆಕೆಗೆ ಜಮೀನು ಮಾರಾಟ ಮಾಡುವ ಅವಶ್ಯಕತೆ ಏನು ಇತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅವಳು ಹೊಲವನ್ನು ಕಡತಿ ಹಾಕಿದ್ದಳು ಹಾಗೂ ದೇನೆ ಇತ್ತು ಮತ್ತ ಮೊಮ್ಮಗಳ ಮದುವೆ ಸಲುವಾಗಿ ಮಾರಾಟಕ್ಕೆ ತೆಗೆದಿದ್ದಳು. ಪ್ರತಿವಾದಿಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ, ಅವರೆಂದರೆ ಕಾಶಿನಾಥ ಮತ್ತು ದೀಲಿಪ್ ಇರುತ್ತಾರೆ. ಪ್ರತಿವಾದಿ ಮಗಳಾದ ಸವೀತಾ ಅವಳ ಮಗಳ ಮದುವೆ ಸಲುವಾಗಿ ದೇನೆ ಇತ್ತು. ಸದರಿ ಸವೀತಾನ ಗಂಡ ಜೀವಂತ ಇರುತ್ತಾರೆ.

ನನ್ನ ಮುಖ್ಯ ವಿಚಾರಣೆಯಲ್ಲಿ ಪ್ರತಿವಾದಿಗೆ ದೇನೆ ಇತ್ತು ಹಾಗೂ ಅವಳ ಮೊಮ್ಮಗಳ ಸಲುವಾಗಿ ಸಾಲ ಮಾಡಿಕೊಂಡಿದ್ದಳು ಎಂದು ನಾನು ಹೇಳಿರುವುದಿಲ್ಲ. ವಾದಿಗೆ ಜಮೀನನ್ನು ಮಾರಾಟ ಮಾಡುತ್ತೇನೆ ಎಂದು ಪ್ರತಿವಾದಿ ನನ್ನನ್ನು ಕೇಳಿರುತ್ತಾಳೋ ಅಥವಾ ವಾದಿಯನ್ನು ಕೇಳಿರುತ್ತಾಳೋ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಮೊದಲು ಗೇಮುಗೆ ಮತ್ತು ಸುಭಾಶ್‌ಗೆ ಮಾರಾಟ ಮಾಡುತ್ತೇನೆ ಎಂದು ಕೇಳಿದ್ದಳು, ಅವರು ತೆಗೆದುಕೊಳ್ಳದೇ ಇರುವ ಕಾರಣ ಪ್ರತಿವಾದಿ ನನಗೆ ಹೊಲ ಮಾರಾಟ ಮಾಡುವುದು ಇದೆ ಎಂದು ಹೇಳಿರುತ್ತಾಳೆ, ಆಗ ನಾನು ವಾದಿಗೆ ಜಮೀನು ಲಗತ್ ಇದೆ ಕಾರಣ ಅವರಿಗೆ ಮಾರಾಟ ಮಾಡುತ್ತೇನೆ ಎಂದು ಪ್ರತಿವಾದಿ ಒಪ್ಪಿಕೊಂಡಿರುತ್ತಾಳೆ ಎಂದು ನುಡಿಯುತ್ತಾರೆ. ವಾದಿಗೆ ಜಮೀನು ಮಾರಾಟ ಮಾಡುವುದು ಇದೆ ಎಂದು ನಾನು ಹೇಳಿರುತ್ತೇನೆ.

ಗೇಮುಗೆ ಮತ್ತು ಸುಭಾಶ್ ರವರಿಗೆ ಜಮೀನನ್ನು ಮಾರಾಟ ಮಾಡಲು ಪ್ರತಿವಾದಿ ಕೇಳಿರುತ್ತಾಳೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ದಾವಾ ಸ್ವತ್ತಿನ ವ್ಯವಹಾರದ ಮಾತುಕತೆ ಯಾವ ದಿನ ಆಯಿತು ಎಂದು ದಿನಾಂಕ ನನಗೆ ನಿಖರವಾಗಿ ನೆನಪು ಇಲ್ಲ. ಮಾತುಕತೆಯಾದ ದಿನವೇ ನಿಪಿ-1 ನ್ನು ಬರೆದಿರುತ್ತಾರೆ. ಸುಮಾರು ಮುಂಜಾನೆ 8.00-9.00 ರಿಂದ ಮದ್ಯಾಹ್ನ 2.00 ಗಂಟೆಯವರೆಗ ಸೌದಾ ಆಗಿರುತ್ತದೆ. ಮಾತುಕತೆ ಮುಗಿದ ನಂತರ ಪ್ರತಿವಾದಿಗೆ ರೂ.5 ಲಕ್ಷ ಹಣ ಕೊಟ್ಟಿರುತ್ತೇವೆ. ಹಣ ಕೊಟ್ಟ ನಂತರ ನಾವೇಲ್ಲರೂ ಆಳಂದ ಉಪ ನೋಂದಣಿ ಕಛೇರಿಗೆ ಬಂದಿರುತ್ತೇವೆ. ಆಗ ಸಮಯ 3.00 ರಿಂದ 3.30 ಗಂಟೆಯಾಗಿತ್ತು. ನೋಂದಣಿ ಆ ದಿನ ಆಗಲಿಲ್ಲ, ಏಕೆಂದರೆ ಸರ್ವೆ ಮಾಡಿಸುವುದು ಇದೆ ಎಂದು ಹೇಳಿರುತ್ತಾರೆ.

ಸದರಿ ವಿಷಯವನ್ನು ಉಪ ನೋಂದಣಿ ಸಿಬ್ಬಂದಿ ಮುನಿರ್ ರವರ ಮಗನಿಗೆ ಕೇಳಿರುತ್ತೇವೆ, ಆಗ ಅವರು ಸರ್ವೆ ಆಗಬೇಕು ಎಂದು ಹೇಳಿರುತ್ತಾರೆ. ತದನಂತರ ಆ ದಿನ ನಾವು ಊರಿಗೆ ವಾಪಸ್ ಹೋಗಲಿಲ್ಲ, ಆದರೆ ಬೆರಳಚ್ಚುಗಾರರಾದ ಮುನಿರ್ ಸಾಬ ರವರ ಹತ್ತಿರ ಹೋಗಿರುತ್ತೇವೆ. ಆಗ ಸಮಯ 4.00 ಗಂಟೆಯಾಗಿತು. ಆಗ ಮುನಿರ್ ಸಾಬ ಹತ್ತಿರ ಜಮೀನಿನ ಮಾತುಕತೆಯಾದ ಬಗ್ಗೆ ಹಾಗೂ ವ್ಯವಹಾರದ ಬಗ್ಗೆ ಹೇಳಿರುತ್ತೇವೆ. ಆಗ ಮುನಿರ್ ಸಾಬ ಒಂದು ಸ್ಟ್ಯಾಂಪ್ ತೆಗೆದುಕೊಂಡು ಬನ್ನಿ ಹೇಳಿರುತ್ತಾರೆ. ಆಗ ಛಾಪಾ ಕಾಗದ ತೆಗೆದುಕೊಂಡು ಬಂದಿರುತ್ತೇವೆ. ಅದೇ ದಿನ ನಾವು ಮೊದಲು ಉಪ ನೋಂದಣಿ ಕಛೆರಿಗೆ ಹೋದಾಗ ಮುನಿರ್ ಮಗ ಒಂದು ಸ್ಟ್ಯಾಂಪ್ ತೆಗೆದುಕೊಂಡು ಹೋಗ ಅಂತ ಹೇಳಿದ್ದ, ಆ

ಕಾರಣ ನಾವು ಸ್ಟ್ಯಾಂಪ್‌ನ್ನು ತೆಗೆದುಕೊಂಡು ಮುನಿರ್ ಸಾಬ ಬಳಿ ಹೋಗಿರುತ್ತೇವೆ, ಆಗ ಸಮಯ 3.00-4.00 ಗಂಟೆಯಾಗಿತ್ತು.

ಸದರಿ ಮುನಿರ್ ಸಾಬ ಮತ್ತು ಮುನಿರ್ ಮಗ ಹತ್ತಿರ ಹೋಗಿದ್ದರ ಬಗ್ಗೆ ಹಾಗೂ ಸ್ಟ್ಯಾಂಪ್ ತೆಗೆದುಕೊಂಡು ಬಾ ಅಂತ ಹೇಳಿದ್ದರ ಬಗ್ಗೆ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿಲ್ಲ. ಮುನಿರ್ ಸಾಬ ಬೆರಳಚ್ಚು ಮಾಡಿದ ಛಾಪಾ ಕಾಗದವನ್ನು ನಮಗೆ ಓದಿ ಹೇಳಿರುತ್ತಾರೆ. ನಮಗೆ ಸದರಿ ಛಾಪಾ ಕಾಗದದಲ್ಲಿರುವ ವಿಷಯದ ಬಗ್ಗೆ ಮುನಿರ್ ಸಾಬ ವಿವರವಾಗಿ ಅಂದರೆ ಕ್ರಯ ಕರಾರು ಹಣ ಆವತ್ತೆ ಮುಟ್ಟಿದ ಬಗ್ಗೆ ಹಾಗೂ ಮಾತುಕತೆಯಾದ ಬಗ್ಗೆ ಹೇಳಿರುತ್ತಾರೆ.

ದಿಃ 31.01.2017 ರಂದು ನಿಪಿ-1ರ ವ್ಯವಹಾರ ಆಗಿದ್ದು, ಆ ದಿನ ಪ್ರತಿವಾದಿ ಬೇರೆಯವರ ಜೊತೆ ಯಾವುದೇ ವ್ಯವಹಾರವನ್ನು ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಗೆ ದಿಃ 31.01.2017 ರಂದು ಆದ ಒಂದು ದೃಢಿಕೃತ ನಕಲಿನ ಕ್ರಯ ಕರಾರು ಪತ್ರವನ್ನು ತೋರಿಸಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ **ನಿಡಿ-1** ಎಂದು ಗುರುತಿಸಲಾಯಿತು. ಸಾಕ್ಷಿ ಅದರಲ್ಲಿ ತಮ್ಮ ಸಹಿ ನೋಡಿ ಗುರುತಿಸಿರುತ್ತಾರೆ. ಪ್ರತಿವಾದಿ ದಾವಾ ಸ್ವತುತ ಯಾರಿಂದ ಖರೀದಿಸಿರುತಾಳೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ವಿಠ್ಠಲ್ ರಾವ್ ಪಾಟೀಲ್ ರವರಿಂದ ಖರೀದಿಸಿರುತ್ತಾಳೆ ಎಂದು ನುಡಿಯುತ್ತಾರೆ. ಪ್ರತಿವಾದಿ ದಾವಾ ಸ್ವತ್ತುನ್ನು ತನ್ನ ಸ್ವಂತ ಹಣದಿಂದ ಖರೀದಿಸಿರುತ್ತಾಳೆ. ಸ್ವತಃ ತೆಗೆದುಕೊಂಡಿರುತ್ತಾಳೆ ಎಂದು ನಾನು ಕಾಗದ ಪತ್ರವನ್ನು ನೋಡಿಲ್ಲ. ಪ್ರತಿವಾದಿ ದಾವಾ ಸ್ವತ್ತುನ್ನು ಎಸ್ಸಿ ಎಸ್‌ಟಿ ಬೋರ್ಡ್ ರವರ ಆರ್ಥಿಕ ಸಹಾಯದಿಂದ ಕೊಂಡುಕೊಂಡಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ಆ

ಕಾರಣ ದಾವಾ ಸ್ವತ್ತುನ್ನು ಬೇರೆಯವರಿಗೆ ಮಾರಾಟ ಮಾಡಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಗುಲಾಬಾ ರಾಠೋಡ್ ನನ್ನ ಮಗ ಇರುತ್ತಾರೆ. ಪ್ರತಿವಾದಿ ವಿರುದ್ಧ ನನ್ನ ಮಗ ಕೂಡಾ ದಾವೆ ಮಾಡಿರುವ ಬಗ್ಗೆ ನನಗೆ ಗೊತ್ತಿದೆ. ಸದರಿ ದಾವೆಯನ್ನು ನನ್ನ ಮಗ ಪ್ರತಿವಾದಿಯಿಂದ 1 ಎಕರೆ ತೆಗೆದುಕೊಂಡ ಬಗ್ಗೆ ಹಾಕಿರುತ್ತಾನೆ. ಸದರಿ ಹೊಲ ತೆಗೆದುಕೊಂಡ ಬಗ್ಗೆ ಕಾಗದ ಪತ್ರ ಆಗಿರುತ್ತವೆ. ಸದರಿ ನನ್ನ ಮಗ ತೆಗೆದುಕೊಂಡ ಹೊಲದ ಮಾತುಕತೆ ಸಮಯದಲ್ಲಿ ನಾನು ಕೂಡಾ ಇದ್ದೆ. ಸದರಿ ದಾವೆ ಅಬಸಾತ ರಾಜಿಯಾಗಿರುತ್ತದೆ. ನನ್ನ ಮಗ ಗುಲಾಬ ಮತ್ತು ವಾದಿ ಮಗ ಶಿವಾಜಿ ಸ್ನೇಹಿತರು ಎಂದರೆ, ಸಾಕ್ಷಿ ಅಣ್ಣ-ತಮ್ಮಂದಿರು ಎಂದು ನುಡಿಯುತ್ತಾರೆ.

ಸದರಿ ನಿಪಿ-1ರ ವ್ಯವಹಾರದ ಆದ ನಂತರ 2-3 ದಿನ ಬಟ್ಟು ನೋಟರಿ ಮಾಡಿಸಿರುತ್ತೇವೆ. ನೋಟರಿ ಮಾಡಿಸಲು ನಾನು, ಸೋನುಬಾಯಿ, ವಾದಿ, ಗೇಮು, ಮಾರುತಿ, ಲಕ್ಷ್ಮಣ, ಗೋಪಿ, ರಮೇಶ, ಅರ್ಜುನ, ಜೈರಾಮ, ಮೋತಿರಾಮ, ಗೋವಿಂದ ಎಲ್ಲರು ಬಂದಿರುತ್ತೇವೆ. ನನ್ನ ಸಮಕ್ಷಮ ನಿಪಿ-1ರ ಛಾಪಾ ಕಾಗದವನ್ನು ನೋಟರಿ ಮಾಡಿರುತ್ತಾರೆ. ಸಾಕ್ಷಿ ಮುಂದುವರೆದು ನೋಟರಿ ಸಮಕ್ಷಮ ಬಂದಾಗ ಅಲ್ಲಿ ಬಹಳ ಗದ್ದಲು ಇತ್ತು, ಆಗ ನಾವೆಲ್ಲರು ಮುನಿರ್ ಸಾಬ ಹತ್ತಿರ ಹೋಗಿರುತ್ತೇವೆ, ಆಗ ಮುನಿರ್ ಸಾಬ ನಮ್ಮೆಲ್ಲರನ್ನು ಕರೆದುಕೊಂಡು ಬಂದು ನೋಟರಿ ಮಾಡಿಸಿಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ.

ನಾನು ಹೇಳಿದಂತೆ ಪ್ರತಿವಾದಿಗೆ ದಾವಾ ಸ್ವತ್ತುನ್ನು ಮಾರಾಟ ಮಾಡುವ ಯಾವುದೇ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಮೊಮ್ಮಗಳ ಮದುವೆ ಮಾಡುವುದು

ಅವಳ ತಂದೆ-ತಾಯಿಯದು ಜವಾಬ್ದಾರಿ ಇರುತ್ತದೆ ಎಂದರೆ, ಸಾಕ್ಷಿ ಪ್ರತಿವಾದಿ ತನ್ನ ಅಳಿಯನ ಬಳಿ ರೂ.2 ಲಕ್ಷ ಸಾಲ ಪಡೆದುಕೊಂಡಿದ್ದಳು, ಆ ಕಾರಣ ಹೊಲ ಮಾರಾಟ ಮಾಡಿದ್ದಳು ಎಂದು ನುಡಿಯುತ್ತಾರೆ. ಸದರಿ ರೂ.2 ಲಕ್ಷ ಸಾಲದ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ಪ್ರತಿವಾದಿ ತನ್ನ ಅಳಿಯನ ಬಳಿ ರೂ.2 ಲಕ್ಷ ಸಾಲ ಪಡೆದುಕೊಂಡಿದ್ದಳು ಎಂದು ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ಪ್ರತಿವಾದಿ ತನ್ನ ಜಮೀನನ್ನು ಮಾರಾಟ ಮಾಡುವುದು ಇದೆ ಯಾರಿಗಾದರೂ ಕೇಳು ಎಂದು ನನಗೆ ಹೇಳಿದ್ದಳು ಹಾಗೂ ನಂತರ ನಾನು ವಾದಿಯನ್ನು ಕೇಳಿದೆ ಎಂದು ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ಪ್ರತಿವಾದಿ ಮನೆ ಎದುರುಗೆ ಮಾತುಕತೆ ಆಯಿತು ಹಾಗೂ ಅವಳು ರೂ.5 ಲಕ್ಷ ಹಣ ಪಡೆದುಕೊಂಡಿರುತ್ತಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮಗನ ಜೊತೆ ಪ್ರತಿವಾದಿ ವ್ಯವಹಾರ ಸುಮಾರು ರೂ.5,85,000/- ಗಳಿಗೆ ಆಗಿರುತ್ತದೆ. ನಿಡಿ-1 ರ ವ್ಯವಹಾರ ಮತ್ತು ನಿಪಿ-1 ರ ವ್ಯವಹಾರ ಬೇರೆ-ಬೇರೆ ದಿನ ಆಗಿರುತ್ತದೆ. ಹಣದ ಮುಟ್ಟಿದ ನಂತರ ಆಳಂದಗೆ ಬಂದೇವು ನಂತರ ಉಪನೋಂದಣಿ ಕಛೇರಿಗೆ ಹೋಗಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನಿಪಿ-1 ನ್ನು ಬೆರಳಚ್ಚು ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಸುಮಾರು ರೂ.5 ಲಕ್ಷ ಹಣವನ್ನು ಪ್ರತಿವಾದಿಗೆ ಕೊಡುವ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ನನ್ನ ಮಗ ಗುಲಾಬ ಬಳಿ ರೂ.1 ಲಕ್ಷ ಹಣ ಪಡೆದುಕೊಂಡಿದ್ದರಿಂದ ನಾವುಗಳು ಸೇರಿ ನಿಪಿ-1 ಮತ್ತು ನಿಡಿ-1 ನ್ನು ನನ್ನ ಮಗ ಮತ್ತು ವಾದಿ ಮಗ ಶಿವಾಜಿ ಸೇರಿ

ಸೃಷ್ಠಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-1 ರ ಕೇಸಿನಲ್ಲಿ ಪ್ರತಿವಾದಿ ಪರವಾಗಿ ಅನಿಲ್ ಎಂಬುವವರು ಸಾಕ್ಷಿ ಹೇಳಿದ್ದಕ್ಕೆ, ಆತನಿಗೆ ನಾನು ಮತ್ತು ನನ್ನ ಮಗ ಸೇರಿ ಅನಿಲ್‌ನ ತಂದೆ ಮೇಲೆ ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿ ಮಧ್ಯ ನಾನು ಹೇಳಿದಂತೆ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**